ದಿನಾಂಕಃ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎ.ಟಿ. ವಕೀಲರಿಂದಃ -

5. ರಿಕ್ಷಾದಲ್ಲಿ ಹೋಗುತ್ತಿದ್ದರು ಎಂದು ಹೇಳಲಾದ ಶಶಿಕುಮಾರ ಮತ್ತಿತರರು ನಮ್ಮ ಊರಿನವರು ಮತ್ತು ನಮ್ಮ ಜಾತಿಯವರು ಎಂದರೆ ಸರಿ. ಕೆಸವಳ್ಳಿಯಿಂದ ಗಲಾಟೆಯಾಗಿತ್ತು ಎಂದು ಹೇಳುವ ಸ್ಥಳಕ್ಕೆ 3 ಕಿಮೀ ಆಗಬಹುದು. ನಾವು ಮೊದಲೇ ಅಲ್ಲಿ ಅಂಗಡಿಯ ಬಳಿ ಇದ್ದೆವು. ಗಲಾಟೆಯಾಗಿತ್ತು ಎಂದು ಹೇಳಲಾದ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ.

6. ನಾನು ಹೋಗುವಾಗ ಜೋರಾಗಿ ಗಲಾಟೆಯಾಗುತ್ತಿತ್ತು. ನನ್ನ ಜೊತೆ ಹರೀಶ್ ಎನ್ನುವವರು ಇದ್ದರು. ನಾವು ಹೋಗುತ್ತಿರುವಾಗ ಆರೋಪಿತನು ನಮ್ಮನ್ನು 80-100 ಅಡಿ ದೂರದಿಂದ ನೋಡಿ ಹೋದನು. ದಿಃ 06-04-2017 ರಂದು ಹೇಮಾವತಿ ನಗರದಲ್ಲಿ ನನ್ನ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡಿದ್ದರು. ಸದರಿ ಹೇಳಿಕೆಯನ್ನು ನಾನು ಓದಿ ನೋಡಿಕೊಂಡಿರುವುದಿಲ್ಲ.

7. ಪೊಲೀಸರು ಜಪ್ತು ಮಾಡಿಕೊಂಡ ಕಲ್ಲಿಗೆ ಏನಾದರೂ ವಿಶೇಷ ಗುರುತು ಇತ್ತಾ ಎಂದರೆ ಅದು ಕೆಂಪು ಕಲ್ಲಾಗಿತ್ತು. ಆ ಕಲ್ಲಿನಂತಹ ಇತರೆ ಕಲ್ಲುಗಳು ಸುತ್ತಮುತ್ತಲು ಬಿದ್ದಿದ್ದವು ಎಂದರೆ ಸರಿಯಲ್ಲ. ಅಲ್ಲಿ ಒಂದೇ ಕಲ್ಲು ಬಿದ್ದಿತ್ತು.

8. ನಾನು ಪೊಲೀಸರ ಸಮಕ್ಷಮದಲ್ಲಿ ಮಧ್ಯಾಹ್ನ 3.30 ರಿಂದ 4.30 ಅವಧಿಯಲ್ಲಿ ಸಹಿ ಮಾಡಿರುತ್ತೇನೆ. ಮಾಡಿದ ಬರವಣಿಗೆಯಲ್ಲಿ ಏನೇನು ಬರೆಯಲಾಗಿತ್ತು ಎಂದು ನಾನು ಓದಿ ನೋಡಿರುವುದಿಲ್ಲ.

ಗಲಾಟೆಯಾದ ಮರುದಿನ ಪೊಲೀಸರು ಬಂದು ಮಹಜರ್ ಮಾಡಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಗಲಾಟೆಯಾದ ದಿನವೇ ಪೊಲೀಸರು ಮಹಜರ್ ಮಾಡಿರುತ್ತಾರೆ. ಅಲ್ಲಿ ಯಾವುದೇ ಫೋಟೋ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

9. ಅಲ್ಲಿ ಯಾವುದೇ ಘಟನೆ ನಡೆದಿರುವುದಿಲ್ಲ ಮತ್ತು ನಾನು ಯಾವುದೇ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಶಶಿಕುಮಾರ ಮತ್ತಿತರರು ಆರೋಪಿಯ ಸ್ಯಾಂಟ್ರೋ ಕಾರಿಗೆ ಡಿಕ್ಕಿ ಹೊಡೆದು ನಂತರ ಅವರೇ ಅನಗತ್ಯವಾಗಿ ಜಗಳ ತೆಗೆದು ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

10. ಆರೋಪಿ ಮತ್ತು ಚಾಸಾ.1 ರವರು ಬೇರೆ ಬೇರೆ ಊರಿನವರು ಎಂದರೆ ಒಂದೇ ಪಂಚಾಯ್ತಿಗೆ ಸೇರಿದವರು. ನಮ್ಮ ಊರಿಗೂ ಆರೋಪಿಯ ಊರಿಗೂ 5 ಕಿಮೀ ಅಂತರ ಇರುತ್ತದೆ. ಗಲಾಟೆಯಾಗಿತ್ತು ಎಂದು ಹೇಳುವ ಸಮಯದ ಪೂರ್ವದಲ್ಲಿ ನಮ್ಮ ಮತ್ತು ಆರೋಪಿಯ ನಡುವೆ ಯಾವುದೇ ಮಾತುಕತೆ ಆಗಿರುವುದಿಲ್ಲ ಎಂದರೆ ಸರಿ.

11. ಅಭಿಯೋಜಕರವರು ಮಾಡಿದ ಪಾಟೀ ಸವಾಲಿನಲ್ಲಿ ನಾನು ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಮು.ಮಾ.1 ನ್ನು ನನ್ನ ಸಮಕ್ಷಮ ಪೊಲೀಸರು ಜಪ್ತು ಪಡಿಸಿಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಶಶಿಕುಮಾರ ಮತ್ತು ಇತರರಿಗೆ ಸರ್ಕಾರದಿಂದ ಪರಿಹಾರದ ಹಣ ಸಿಗಲಿ ಎನ್ನುವ ಉದ್ದೇಶದಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ